ಕುಡಿಯುವ ನೀರಿನ ಸರಬರಾಜು

2490(3180); ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ (ನಿಪ್ಪಾಣಿ)

ಅ) ನಿಪ್ಪಾಣಿ ಮತಕ್ಷೇತ್ರದ ಯಾವ ಯಾವ ಗ್ರಾಮಗಳಲ್ಲಿ ಓ.ಹೆಚ್.ಟಿ / ಡಬ್ಲೂ.ಟಿ.ಪಿಗಳ ಮೂಲಕ ಕುಡಿಯುವ ನೀರಿನ ಸರಬರಾಜು ಆಗುತ್ತಿದೆ;

ಆ) ಅವು ಎಷ್ಟು ಸಾಮರ್ಥ್ಯವನ್ನು ಹೊಂದಿದೆ ಹಾಗೂ ಸಮರ್ಪಕವಾಗಿದೆಯೇ;

ಇ) ನಿರ್ಮಾಣವಾದಾಗಿನಿಂದ ಎಷ್ಟು ಬಾರಿ ಮರಳು ಬದಲಾವಣೆ ಮಾಡಲಾಗಿದೆ; ಅವುಗಳ ನಿರ್ವಹಣೆ ಮತ್ತು ದುರಸ್ಥಿಗೆ ವೆಚ್ಚವಾಗಿರುವ ಅನುದಾನವೆಷ್ಟು (ಸಂಪೂರ್ಣ ವಿವರ ನೀಡುವುದು);

ಈ) ಇತ್ತೀಚೆಗೆ ನಿಪ್ಪಾಣಿ ಮತಕ್ಷೇತ್ರದ ಬೆನಾಡಿ ಗ್ರಾಮದಲ್ಲಿ ಕುಡಿಯುವ ನೀರಿನ ಸರಬರಾಜು ಯೋಜನೆಯ ಘಟಕದಲ್ಲಿದ್ದ ಮರಳನ್ನು ತೆಗೆದು ಅನಧಿಕೃತವಾಗಿ ಮಾರಾಟ ಮಾಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಬಂದಿದ್ದಲ್ಲಿ, ಯಾರು ಮಾರಾಟ ಮಾಡಿದ್ದಾರೆ; ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸರ್ಕಾರವು ಕ್ರಿಮಿನಲ್ ಮೊಕದ್ದಮೆ ಹಾಕುವ ಉದ್ದೇಶ ಹೊಂದಿದೆಯೇ (ವಿವರ ನೀಡುವುದು);

ಊ) ಪ್ರಸ್ತುತ ಸ್ಥಗಿತಗೊಂಡಿರುವ ಕುಡಿಯುವ ನೀರನ್ನು ಒದಗಿಸಿಕೊಡುವಲ್ಲಿ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ?

ಶ್ರೀ ಎಚ್.ಕೆ. ಪಾಟೀಲ್ (ಗ್ರಾ.ಪಂ. ರಾಜ್ ಸಚಿವರು)

ಅ) ಬೆಳಗಾವಿ ಜಿಲ್ಲೆಯ ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗದ ಬೆಳಗಾವಿ ವ್ಯಾಪ್ತಿಯಲ್ಲಿಯ ಚಿಕ್ಕೋಡಿ ಉಪ ವಿಭಾಗದ ವ್ಯಾಪ್ತಿಯಲ್ಲಿ ಬರುವ ನಿಪ್ಪಾಣಿ ವಿಧಾನ ಸಭಾ ಮತಕ್ಷೇತ್ರದ 1) ಕೊಗನೊಳಿ, 2) ಸೌಂದಲಗಾ, 3) ಬೆನ್ನಾಡಿ, 4) ಮಾಂಗೂರು, 5) ಕಾರದಗಾ, 6) ಮಾಣಕಾಪೂರ, 7) ಬೋರಗಾಂವ, 8) ಆಡಿ, 9) ಯಮಗರ್ಣಿ, 10) ಶೇಂಡೂರು, 11) ಭೋಜ, 12) ಗಳತಗಾ, 13) ಅಕ್ಕೋಳ, 14) ಅಪ್ಪಾಚಿವಾಡಿ, 15) ಮಮದಾಪೂರ ಕೆಎಲ್, 16) ಕುನ್ನೂರ ಸೇರಿ ಒಟ್ಟು 16 ಗ್ರಾಮಗಳಲ್ಲಿ WTP ಯಿಂದ ಇದರಿಂದ ಶುದ್ಧೀಕರಿಸಿದ ನೀರು ಗ್ರಾಮಗಳಲ್ಲಿ ಪೂರೈಕೆ ಆಗುತ್ತಿದೆ. ಹಾಗೂ ಒಟ್ಟು 53 ಗ್ರಾಮಗಳಲ್ಲಿ 82 ಓವರ್ ಹೆಡ್ ಟ್ಯಾಂಕ್‌ಗಳಿದ್ದು, ಇವುಗಳಿಂದ ಶುದ್ಧ ನೀರು ಪೂರೈಕೆ ಮಾಡಲಾಗುತ್ತಿದೆ. ವಿವರಗಳನ್ನು **ಅನುಬಂಧದಲ್ಲಿ** ಲಗತ್ತಿಸಿದೆ.

ಆ) ಗ್ರಾಮವಾರು ಮತ್ತು ಸಾಮರ್ಥ್ಯವಾರು ವಿವರ / ಮಾಹಿತಿಯನ್ನು **ಅನುಬಂಧದಲ್ಲಿ** ಲಗತ್ತಿಸಿದೆ.

ಇ) ಕುಡಿಯುವ ನೀರಿನ ಯೋಜನೆಗಳು ಪೂರ್ಣಗೊಂಡ ನಂತರ ಗ್ರಾಮ ಪಂಚಾಯತಿಗಳಿಗೆ ಹಸ್ತಾಂತರಿಸಲಾಗುತ್ತಿರುವುದು. ಹಾಗೂ ಅವುಗಳ ನಿರ್ವಹಣೆಯನ್ನು ಸಹ ಗ್ರಾಮ ಪಂಚಾಯತಿಗಳಿಂದ ನಿರ್ವಹಿಸಲಾಗುತ್ತಿದೆ. ಆದ್ದರಿಂದ ಮರಳು ಬದಲಾವಣೆ ಮಾಡುವುದು, ಆಯಾ ಗ್ರಾಮ ಪಂಚಾಯತಿಗೆ ಸಂಬಂಧಿಸಿರುವುದು. ಯಾವುದೇ WTP ಮರಳನ್ನು (15 ಸೇ.ಮೀ ಮೇಲ್ ಪದರು) ಪ್ರತಿ ವರ್ಷ ಬದಲಾವಣೆ ಮಾಡಬೇಕಾಗುವುದು. ಆದಾಗ್ಯೂ ಗ್ರಾಮ ಪಂಚಾಯತದಿಂದ ನಿರ್ವಹಿಸದೇ ಇರುವ ಬೋರಗಾಂವ್ ಮತ್ತು ಕೋಗನೊಳಿ ಗ್ರಾಮಗಳ WTPಗಳ ಮರಳನ್ನು ಬದಲಾಸಲಾಗಿದ್ದು,

ಅದಕ್ಕೆ ಬೋರಗಾಂವ್ ಗ್ರಾಮಕ್ಕೆ ರೂ. 12.00 ಲಕ್ಷ ಮತ್ತು ಕೋಗನೊಳಿ ಗ್ರಾಮಕ್ಕೆ ರೂ. 10.00 ಲಕ್ಷ ಅನುದಾನವನ್ನು ನಿಗದಿಪಡಿಸಲಾಗಿದೆ.

ಅದೇ ರೀತಿ ಗ್ರಾಮ ಪಂಚಾಯತಿಗಳ ಅನುದಾನದ ತೊಂದರೆಯಿಂದ ಮರಳು ಬದಲಾಯಿಸದೇ ಇರುವುದು ಅಕ್ಕೋಳ, ಕೋನ್ನೂರು ಮತ್ತು ಸೌಂದಲಗಾ ಹಾಗೂ ಬೆನ್ನಾಡಿ ಗ್ರಾಮಗಳ WTP ಮರಳು ಬದಲಾಯಿಸಲು ಕೈಗೊಂಡಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಅಕ್ಕೋಳ ಗ್ರಾಮಕ್ಕೆ ರೂ. 8.00 ಲಕ್ಷ, ಕೂನ್ನೂರು ರೂ. 9.00 ಲಕ್ಷ, ಬೆನ್ನಾಡಿ ರೂ. 8.00 ಲಕ್ಷ ಮತ್ತು ಸೌಂದಲಗಾಕ್ಕೆ ರೂ. 10.00 ಲಕ್ಷ ಅನುದಾನ ನಿಗದಿಪಡಿಸಲಾಗಿದೆ.

ಈ) ಬಂದಿದೆ.

ಉ) ಮರಳು ಮಾರಾಟ ಸ್ಥಳೀಯ ಗ್ರಾಮ ಪಂಚಾಯತ್ ಮಟ್ಟದಲ್ಲಿ ಮಾಡಿರುವುದರಿಂದ ಸದರಿ ವಿಷಯಕ್ಕೆ ಸಂಬಂಧಿಸಿದ ಮಾಹಿತಿ / ವಿವರಣೆಯನ್ನು ತಾಲ್ಲೂಕ್ ಪಂಚಾಯತ್ ಮತ್ತು ಗ್ರಾಮ ಪಂಚಾಯತ್‌ಯಿಂದ ಪಡೆದು ನಿಯಮಾನುಸಾರ ಕ್ರಮವಹಿಸಲಾಗುವುದು.

ಊ) ನಿಪ್ಪಾಣಿ ಮತಕ್ಷೇತ್ರದ ಎಲ್ಲಾ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರನ್ನು ಪೂರೈಸಲಾಗುತ್ತದೆ.

(1) ಗಳತಗಾ ಗ್ರಾಮಕ್ಕೆ ವೇದಗಂಗಾ ನದಿಯ ಜಲಮೂಲದಿಂದ 2003–2004ನೇ ಸಾಲಿನಲ್ಲಿ ರೂ. 163.95 ಲಕ್ಷಗಳ ಅಂದಾಜು ಮೊತ್ತದಲ್ಲಿ ರಾಜೀವ್ ಗಾಂಧಿ ಸಬ್‌ಮಿಷನ್ ಕುಡಿಯುವ ನೀರು ಸರಬರಾಜು ಯೋಜನೆಯಡಿಯಲ್ಲಿ ಕೈಗೊಂಡು ಪೂರ್ಣಗೊಳಿಸಲಾಗಿದೆ. ಕಾಲಾಂತರದಲ್ಲಿ ನದಿ ನೀರಿನ ಹರಿವಿನ

ದಾರಿಯು ಬದಲಾವಣೆಯಿಂದಾಗಿ Intake pipe and Jackwellಗೆ ನೀರು ಬರುವ ದಾರಿಯು ಸಂಪೂರ್ಣವಾಗಿ ಮುಚ್ಚಿಹೋಗಿರುತ್ತದೆ. ಇದರಿಂದಾಗಿ ಯೋಜನೆಯು ಸ್ಥಗಿತಗೊಂಡಿರುತ್ತದೆ. ಸದರಿ ಯೋಜನೆಯನ್ನು ದುರಸ್ತಿಗೊಳಿಸಲು ರೂ. 200.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ರೇಖಾ ಅಂದಾಜನ್ನು ತಯಾರಿಸಿದ್ದು, ಸದರಿ ಪ್ರಸ್ತಾವನೆಯನ್ನು SLSSC ಸಭೆಯಲ್ಲಿ ಮಂಡಿಸಿ ಅದರ ನಿರ್ಧಾರದಂತೆ ಕ್ರಮವಹಿಸಲು ಮುಖ್ಯ ಇಂಜಿನಿಯರ್‌ರವರಿಗೆ ಸೂಚಿಸಲಾಗಿದೆ.

(2) ಮಾನಕಾಪೂರ–ಕಸನಾಳ ಗ್ರಾಮದ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯು 2001–02ನೇ ಸಾಲಿನಲ್ಲಿ ರೂ. 114.62 ಲಕ್ಷಗಳ ಅಂದಾಜು ಮೊತ್ತದಲ್ಲಿ ರಾಜೀವ್ ಗಾಂಧಿ ಸಬ್‌ಮಿಷನ್ ಕುಡಿಯುವ ನೀರು ಸರಬರಾಜು ಯೋಜನೆಯಡಿಯಲ್ಲಿ ಕೈಗೊಂಡು ಪೂರ್ಣಗೊಳಿಸಲಾಗಿದೆ. ಸದರಿ ಯೋಜನೆಯ ಜಲಮೂಲವಾದ ಪಂಚಗಂಗಾ ನದಿಯ ನೀರು ಕಲುಷಿತಗೊಂಡಿರುವುದರಿಂದ ಸದರಿ ಜಲಮೂಲದ ನೀರನ್ನು ಬಳಸದೇ ದೂದಗಂಗಾ ನದಿಯ ನೀರು ಜಲಮೂಲವಾಗಿ ತೆಗೆದುಕೊಳ್ಳಲು ಪುನರುಶ್ಚೇತನ ಅಂದಾಜು ಪಟ್ಟಿ ತಯಾರಿಸಲಾಗುತ್ತಿದೆ. ಜಿಲ್ಲಾ ಆಡಳಿತದಿಂದ ಪ್ರಸ್ತಾವನೆಯು ಸ್ವೀಕೃತಗೊಂಡ ನಂತರ ತಾಂತ್ರಿಕ ಮತ್ತು ಆರ್ಥಿಕ ಸಿಂಧುತ್ವವನ್ನು ಪರಿಶೀಲಿಸಿ ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.

ಚುಕ್ಕೆರಹಿತ ಪ್ರಶ್ನೆ ಸಂಖ್ಯೆ:3180ರ ಲಗತ್ತು ಅನುಬಂಧ

ನಿಪ್ಪಾಣಿ ಮತಕ್ಷೇತ್ರದಲ್ಲಿರುವ ಕುಡಿಯುವ ನೀರಿನ ಓವರ್ ಟ್ಯಾಂಕಗಳ ಸಾಮರ್ಥ್ಯವಾರು, ವರ್ಷವಾರು ವಿವರ.

ಕ್ರ.ಸಂ	ಗ್ರಾಮದ ಹೆಸರು	ಸಾಮರ್ಥ್ಯ ೦.೫೦ ಲಕ್ಷ ಲೀಟರ್	ಸಾಮರ್ಥ್ಯ ೧.೦೦ ಲಕ್ಷ ಲೀಟರ್	ಸಾಮರ್ಥ್ಯ ೧.೫೦ ಲಕ್ಷ ದಿಂದ ೩.೦೦ ಲಕ್ಷ ಲೀಟರ್ ವರೆಗೆ	ಒಟ್ಟು	ನಿರ್ಮಿಸಿದ ವರ್ಷ
1	ಅ) ಆಡಿ	1 ನಂ	1 ನಂ	---	2 ನಂ	1988-200
2	ಆ) ಹಂಚಿನಾಳ	2 ನಂ	---	---	2 ನಂ	---ಸದರಿ--- 1999
3	ಅ) ಜೈನವಾಡಿ	1 ನಂ	---	---	1 ನಂ	1988
4	ಅಕ್ಕೋಳ	---	2 ನಂ	1	3 ನಂ	1988 & 2000
5	ಅ) ಅಪ್ಪಾಚಿವಾಡಿ	---	---	---	2 ನಂ	2000
6	ಆ) ಹದನಾಳ	1 ನಂ	---	---	1 ನಂ	1999
7	ಅ) ಸುಳಗಾಂವ	1 ನಂ	---	---	1 ನಂ	2000
8	ಆ) ಮತ್ತಿವಾಡ	2 ನಂ	---	---	2 ನಂ	1988 & 2001
9	ಬಾರವಾಡ	1 ನಂ	---	---	1 ನಂ	1989
10	ಬೆಡಕಿಹಾಳ	---	2 ನಂ	---	2 ನಂ	2000
11	ಅ) ಬೆನಾಡಿ	---	3 ನಂ	---	3 ನಂ	2000, 2005 & 2013
12	ಅ) ಬೋಳೆವಾಡಿ	1 ನಂ	---	---	1 ನಂ	
13	ಆ) ಭೋಜ	---	1 ನಂ	1 ನಂ	2 ನಂ	2000 & 2005
14	ಅ) ಭೋಜವಾಡಿ	2 ನಂ	---	---	2 ನಂ	2000
15	ಬೋರಗಾಂವ	---	1 ನಂ	1 ನಂ	2 ನಂ	2000 & 2013
16	ಅ) ಗಳತಗಾ	---	2 ನಂ	---	2 ನಂ	2001

17	ಆ) ಭೀಮಾಪೂರವಾಡಿ	1 ನಂ	—	—	1 ನಂ	2001
18	ಅ) ಹಳದಟ್ಟಿ	1 ನಂ	—	—	1 ನಂ	1990
19	ಹುನ್ನಳಗಿ	1 ನಂ	2 ನಂ	—	3 ನಂ	1989,2000 & 2005
20	ಅ) ಜತ್ರಾಟ	1 ನಂ	—	—	1 ನಂ	2001
21	ಅ) ಶಿರ್ಪವಾಡಿ	1 ನಂ	—	—	1 ನಂ	2002
22	ಕಾರದಗಾ	—	2 ನಂ	—	2 ನಂ	2002
23	ಅ) ಡೋಣೆವಾಡಿ	1 ನಂ	—	—	1 ನಂ	2002
24	ಅ) ಬೋರಗಾಂವವಾಡಿ	1 ನಂ	—	—	1 ನಂ	2002
25	ಆ) ಕೋಡ್ನಿ	—	1 ನಂ	—	1 ನಂ	2000
26	ಅ) ಗಾಯಕನವಾಡಿ	—	1 ನಂ	—	1 ನಂ	2000
27	ಆ) ಕೊಗನೋಳ್ಳಿ	—	—	2 ನಂ	2 ನಂ	2002&2005
28	ಅ) ದತ್ತವಾಡಿ	1 ನಂ	—	—	2 ನಂ	2005
29	ಅ) ಹಣಬರವಾಡಿ	1 ನಂ	—	—	2 ನಂ	2005
30	ಅ) ಕುನ್ನುರ	—	1 ನಂ	—	1 ನಂ	2001
31	ಆ) ಗಜಬರವಾಡಿ	1 ನಂ	—	—	1 ನಂ	2002
32	ಅ) ಶಿವಾಪೂರವಾಡಿ	1 ನಂ	—	—	1 ನಂ	2002
33	ಆ) ಕುರ್ಲಿ	—	2 ನಂ	—	2 ನಂ	2000&2006

ಕ್ರ.ಸಂ	ಗ್ರಾಮದ ಹೆಸರು	ಸಾಮರ್ಥ್ಯ ೦.೫೦ ಲಕ್ಷ ಲೀಟರ್	ಸಾಮರ್ಥ್ಯ ೧೦೦ ಲಕ್ಷ ಲೀಟರ್	ಸಾಮರ್ಥ್ಯ ೧.೫೦ ಲಕ್ಷ ದಿಂದ ೩.೦೦ ಲಕ್ಷ ಲೀಟರ್ ವರೆಗೆ	ಒಟ್ಟು	ನಿರ್ಮಿಸಿದ ವರ್ಷ
34	ಅ) ಭಾಟಿನಾಗನೂರ	—	1 ನಂ	—	1 ನಂ	2005
35	ಆ) ಲಖಿನಾಪೂರ	1 ನಂ	—	—	1 ನಂ	2001
36	ಅ) ಪಡಲಿಹಾಳ	1 ನಂ	—	—	1 ನಂ	2000
37	ಮಮದಾಪೂರ ಕ.ಎಲ್	2 ನಂ	1 ನಂ	—	3 ನಂ	1988,2000&2004
38	ಅ) ಮಾಣಕಾಪೂರ	—	2 ನಂ	—	2 ನಂ	2000&2006
39	ಅ) ಕಸನಾಳ	2 ನಂ	—	—	2 ನಂ	2000&2006
40	ಮಾಂಗೂರ	—	—	2 ನಂ	2 ನಂ	2001&2005
41	ಶಿರದವಾಡ	1 ನಂ	—	—	1 ನಂ	2004
42	ಅ) ಶಿರಗುಪ್ಪಿ	—	1 ನಂ	—	1 ನಂ	2001
43	ಅ) ಬುದಲಮುವಿ	1 ನಂ	—	—	1 ನಂ	2003
44	ಅ)ಸಿದ್ನಾಳ	2 ನಂ	—	—	2 ನಂ	2000 & 2005
45	ಆ) ಸೌಂದಲಗಾ	—	2 ನಂ	—	2 ನಂ	2000 & 2005
46	ಅ) ಭೀವಶಿ	1 ನಂ	—	—	1 ನಂ	2005
47	ಆ) ಯಮಗರ್ಣಿ	2 ನಂ	—	—	2 ನಂ	2001 & 2006
48	ಇ) ಬುಧಿಹಾಳ	1 ನಂ	—	—	1 ನಂ	2001
49	ಅ) ನಾಗನೂರ	1 ನಂ	—	—	1 ನಂ	2001
50	ಆ) ಯರನಾಳ	1 ನಂ	—	—	1 ನಂ	2000
51	ಇ) ತವಂದ	1 ನಂ	—	—	1 ನಂ	2005
52	ಅ) ಗವಾನ	1 ನಂ	—	—	1 ನಂ	2005
53	ಆ) ಅಮಲಝರಿ	1 ನಂ	—1	—	2 ನಂ	2001